AKSHARASURYA
E-ISSN: 2583-620X
Peer-Reviewed, Multi Lingual E-Journal
Volume – 02, Issue – 03, March 2023.

# ಕಲಬುರಗಿಯ ಹಜ್ರತ್ ಸಯ್ಯದ್ ಮಹ್ಮದ ಹುಸೇನಿ

**ಡಾ. ಶಾಂತಪ್ಪ ಎನ್. ಡಂಬಳ**
ಸಹಾಯಕ ಪ್ರಾಧ್ಯಾಪಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿಸ್ತರಣಾ ಕೇಂದ್ರ, ದೇವದುರ್ಗ

ಹೈದ್ರಬಾದ ಕರ್ನಾಟಕದ ಸೂಫಿಗಳಲ್ಲಿ ಬಂದೇನವಾಜರು ಒಬ್ಬರು. ಇವರು ಸೂಫಿ ನಾಸಿರುದ್ದೀನ ಚಿಸ್ತಿಯ ಪರಮ ಶಿಷ್ಯರಾಗಿದ್ದರು. ಉತ್ತರ ಕರ್ನಾಟಕದ ಭಾಗದಲ್ಲಿ ಪ್ರಖ್ಯಾತಿಯನ್ನು ಹೊಂದಿದ್ದಾರೆ. ಬಂದೇನವಾಜರು ಹಿಂದು–ಮುಸ್ಲಿಮನ ಏಕತ್ವದಿಂದ ಕೂಡಿರುವುದರಿಂದ ಅವರಿಗೆ ಬಹುದೊಡ್ಡ ಶಿಷ್ಯ ಪರಂಪರೆ ಹಾಗೂ ಭಕ್ತ ಸಮೂಹವು ಬೆಳೆಯಲು ಪ್ರಮುಖ ಕಾರಣವಾಯಿತು. ಇವರ ಉರುಸಿನ ಸಂದರ್ಭದಲ್ಲಿ ಮೂಲೆ ಮೂಲೆಗಳಿಂದ ಸಹಸ್ರಾರು ಜನರು ಆಗಮಿಸಿ ಸಂತನ ದರ್ಶನವನ್ನು ಪಡೆಯುತ್ತಾರೆ. ದರ್ಶನ ಪಡೆಯಲು ಬಂದ ಅನುಯಾಯಿಗಳು ಅವರವರ ಸಂಪ್ರದಾಯದಂತೆ ಏಕಕಾಲಕ್ಕೆ ನಡೆಯುತ್ತಿದೆ. ಇದು ನೋಡುಗರಿಗೆ ಭಿನ್ನವಾಗಿ ಕಂಡರು ಆಚರಣೆಯಲ್ಲಿ ತಲ್ಲೀನರಾದ ಸಮುದಾಯಗಳಿಗೆ, ಶ್ರಮೀಕವರ್ಗಗಳಿಗೆ ತಾರತಮ್ಯವೆಂದು ಭಾವಿಸುವುದಿಲ್ಲ. ಅದರ ಗೋಜಿಗೂ ಹೋಗುವುದಿಲ್ಲ. ಪೂಜೆ ಹಾಗೂ ಓದಿಕೆಯು ಏಕಕಾಲಕ್ಕೆ ನಡೆಯುತ್ತಿರುವುದರಿಂದ ವೈಚಾರಿಕತೆಯಿಂದ ನಡೆದು ಬಂದವನಿಗೆ ಜವಾಬು ನೀಡಿದಂತೆ ಅನಿಸುತ್ತದೆ.

ಉರುಸಗಳಲ್ಲಿ ನಡೆಯುವ ಕೆಲವು ಸಾಮಾನ್ಯ ಆಚರಣೆಗಳು ಸಕ್ಕರೆ ಮಾಲ್ದಿ, ಹೂವು, ಗಂಧ, ಲೋಭಾ, ಊದುಬತ್ತಿ ಇಟ್ಟು 'ಫತ್ತೇಹಾ' (ಫಾತೇಹ) ಮಾಡಿಸುವುದು, ಹರಕೆಯನ್ನು ಸಲ್ಲಿಸುವಾಗ ಒದ್ದೆ ಬಟ್ಟೆಯಲ್ಲಿ ದರ್ಗಾದವರಿಗೂ ದೀಡ್ ನಮಸ್ಕಾರ ಹಾಕುವುದು, ಚಾಲ ಜೌಳ ತೆಗೆಯುವುದು ದರ್ಗಾ ಮತ್ತು ಸುತ್ತು ಹಾಕುವುದು ಜೀವನದ ಒಂದು ಭಾಗದಂತೆ ಅನುಸರಿಸುತ್ತಾರೆ. ಇದೊಂದು ರೀತಿ ಮೂಡನಂಬಿಕೆಯಾಗಿ ಕಾಣಬಹುದು. ಇದನ್ನೇ ನಾವು ಶ್ರಮೀಕ ವರ್ಗಗಳು ಯಾಕೆ ನಂಬಿಕೊಂಡು ಇಂತಹ ಗದ್ದುಗೆ, ದರ್ಗಾಗಳಲ್ಲಿ ಮಂಡೆಯೂರಿ ಕುಳಿತುಕೊಂಡು ಬದುಕುತ್ತವೆ? ಅದರೊಂದಿಗೆ ಅಫೀಲು ಮಾಡಿಕೊಂಡು ಒಪ್ಪಿಸುತ್ತೆವೆ? ಎಂಬುದನ್ನು ಗ್ರಹಿಸಲು ತಾಯ್ತನವು ಹೊಂದಿರಬೇಕು. ಹಾಗೆಯೇ ಈ ಉರುಸ್‌ಗಳಲ್ಲಿ ವಚನಗಳನ್ನು, ತತ್ವಪದಗಳನ್ನು, ಗೀತೆಗಳನ್ನು, ಜನಪದ ಹಾಡುಗಳನ್ನು ಹಾಗೂ ಖವಾಲಿಗಳನ್ನು ಹಾಡುವುದರ ಮೂಲಕ ಗೇಸುದರಾಜ ಪವಾಡಗಳನ್ನು ತಿಳಿಸುವರು. ಅವರ ಪವಾಡಗಳನ್ನು ಜನರು ಇಂದಿಗೂ ಸಹ ಮೆಲುಕು ಹಾಕಿಕೊಂಡು ಬದುಕುತ್ತಿರುತ್ತಾರೆ.

**ಖಾಜಾ ಬಂದೇನವಾಜರ ಜನನ :**

"ಉತ್ತರ ಭಾರತದ ಸಂಕೀರ್ಣ ಸಮಯದಲ್ಲಿ ದಿವ್ಯ ಚೇತನವೊಂದರ ಆಗಮನಕ್ಕೆ ಜನ ನಿರೀಕ್ಷೆಯಲ್ಲಿದ್ದುದು ತಿಳಿದುಬರುತ್ತದೆ. ಆ ಮೊರೆ ಅಲ್ಲಾಹಾನನ್ನು ಹೋಗಿ ತಲುಪಿದೆಯೇನೋ ಎಂಬಂತೆ ಸೈಯ್ಯದ್ ಯುಸೂಫ್ ಹುಸೇನಿ ಮತ್ತು ಸಯಿದಾ ಬೀಬಿರಾಣಿ ಅವರ ಮಗನಾಗಿ ಹಿಜರಿ ಸಂವತ್ಸರ 721, ರಜಬ್ ತಿಂಗಳ ನಾಲ್ಕನೆಯ ದಿನ ಅಂದರೆ ಕ್ರಿ.ಶ. 1321 ಜುಲೈ 31 ರಂದು ಸಯ್ಯದ್ ಮಹ್ಮದ್ ಹುಸೇನಿ (ಖಾಜಾ ಬಂದೇನವಾಜ್) ಅವರು ದಿಲ್ಲಿಯಲ್ಲಿ ಜನಿಸುತ್ತಾರೆ. ಹೆಸರಾಂತ ಸೂಫಿಸಂತರ ಮನೆತನ ಇವರದಾಗಿತ್ತು. ಇವರ ತಂದೆಯವರಂತೂ ಧರ್ಮಾತ್ಮರಾಗಿದ್ದರು. ಇವರನ್ನು ಜನರು ಪ್ರೀತಿಯಿಂದ 'ಷಾಹ್ ರಾಜೂ ಖತಾಲ್,' 'ಸಯ್ಯದ್ ರಾಜ್' ಎಂದೂ ಕರೆಯುತ್ತಿದ್ದರಂತೆ."[1]

"ಹಜರತ್ ಖಾಜಾ ಬಂದೇನವಾಜರು ಹಜರತ್ ಇಮಾಮ್ ಜೈನುಲ್ ಆಬಿದೀನ್‌ರ ವಂಶಸ್ಥರು. ಈ ವಂಶದಲ್ಲಿನ ಸುಮಾರು 22 ಪ್ರಸಿದ್ಧ ಸೂಫಿ ಸಂತರ ವಂಶವೃಕ್ಷವು ಖಲ್ಫಾಯೆ ರಾಷದೀನ್‌ನ ಅಂತಿಮ ಖಲೀಫಾ ಹಜರತ್ ಅಲಿ ರಹ್ಮತುಲ್ಲಾ ಆಲೈಹಿಯವರ ಮಗ ಹಜರತ್ ಹುಸೈನ್ ರಹ್ಮತುಲ್ಲಾರವರನ್ನು ಸಂಬಂಧಿಸುತ್ತಾ ಹಜರತ್ ಮಹಮ್ಮದ್ ಪೈಗಂಬರರಲ್ಲಿಗೆ ತಲುಪುತ್ತದೆ. ಇವರು ಹುಸೇನಿ ಪರಂಪರೆಯಲ್ಲಿ ಪ್ರಖ್ಯಾತರೆನಿಸಿಕೊಂಡಿದ್ದಾರೆ. ಇವರನ್ನು 'ಮುಷಾಹಿರ್ ಆವ್‌ಲಿಯಾ' ಎಂದು ಕರೆಯುತ್ತಾರೆ."[2]

ಬಂದೇನವಾಜರ ತಲೆಗೂದಲು ಅವರ ಮೋಳಕಾಲಿನವರೆಗೂ ಬಹಳ ಉದ್ದವಾಗಿ ಬೆಳೆದಿದ್ದವು. ದೆಹಲಿಯಲ್ಲಿ ಒಮ್ಮೆ ತಮ್ಮ ಶೇಖ್ (ಗುರು ಪೀರ್ ಅಥವಾ ಮುರ್ಷದ್) ಹಜರತ್ ಖಾಜಾ ನಸೀರುದ್ದಿನ್ ಚಿರಾಫ್ ದೆಹಲಿಯವರು ಪಲ್ಲಕಿಯನ್ನು ತಮ್ಮ ಹೆಗಲ ಮೇಲೆ ಹೊತ್ತು ಹೋಗುತ್ತಿದ್ದರು. ದಾರಿಯಲ್ಲಿ ಅವರ ಕೆಲವು ಕೂದಲುಗಳು ತಮ್ಮ ಗುರುಗಳ ಪಲ್ಲಕಿಯ ಒಂದು ಭಾಗದಲ್ಲಿ ಬಿಡಿಸಲಾಗದಂತೆ ಸಿಕ್ಕಿ ಹಾಕಿಕೊಂಡವು. ಅವುಗಳನ್ನು ಬಿಡಿಸಲು ಹೆಚ್ಚು ಪ್ರಯತ್ನ ಪಟ್ಟರೆ ಗುರುಗಳ ಸವಾರಿಗೆ ಧಕ್ಕೆ ಉಂಟಾಗಬಹುದೆಂಬದು ಭೀತಿ ಹಾಗೂ ಗುರುಭಕ್ತಿಯ ಗೌರವದಿಂದಾಗಿ ಪಲ್ಲಕಿಯನ್ನು ಹೊತ್ತು ಹೋಗುತ್ತಲೇ ಇದ್ದರು. ಆ ಪಲ್ಲಕ್ಕಿಯನ್ನು ಹೊತ್ತ ಇತರ ಶಿಷ್ಯರಿಂದ ಹೇಗೊ ಗುರುಗಳಿಗ ಇವರ ನೋವು ತಿಳಿಯಿತು. ಗುರುಗಳು ಶಿಷ್ಯನ ಗುರುಭಕ್ತಿಯಿಂದ ಬಹಳ ಸಂತೂಷ್ಟಪಟ್ಟು ತಮ್ಮ ಬಾಯಿಯಿಂದ ಫಾರಸೀ ಭಾಷೆಯಲ್ಲಿ ಈ ಉದ್ಗಾರವನ್ನು ಶೇರ್ ಛಂದಸ್ಸಿನಲ್ಲಿ ಹೀಗೆ ತೆಗೆದರು.

ಹರ್‌ಕೆ ಮರೀದ್ ಸಯ್ಯದ್ ಗೇಸೂದರಾಜ್ ಘುದ್,
ವಲ್ಲಾಹ್ ಖಿಲಾಫೇ ನೀಸ್ತಕವೊ ಇಷ್ಯಬಾಜ್‌ಪುದ್

ಅಂದಿನಿಂದ ಇವರ ಹೆಸರಿನ ಮುಂದೆ 'ಗೇಸೂದರಾಜ್' ಎಂಬ ಬಿರುದು ಸೇರಿಕೊಂಡಿತು.[3] ಇದನ್ನು ದೆಹಲಿಯ ಹಜರತ್ ಷಾಹ್‌ಹಖ್ ಮುಹದ್ದಸರವರು ಬಂದೇನವಾಜರ ತಲೆಗೂದಲಿನ ಬಗ್ಗೆ ತಿಳಿಸಿದ್ದನೆಂದು ತಿಳಿದು ಬರುತ್ತದೆ. 'ಗೇಸೂದರಾಜ್'' ಎಂದರೆ 'ಉದ್ದಕೂದಲು' ಎಂದರ್ಥ

ತಂದೆಯವರ ಗಂಬೀರವಾದ ವ್ಯಕ್ತಿತ್ವ, ಧಾರ್ಮಿಕ ಚಿಂತನೆಗಳು, ಆಚರಣೆಗಳು ಸಯ್ಯದ್ ಮಹಮ್ಮದ್ ಹುಸೇನಿ ಅವರ ಎಳೆಯ ಮನಸ್ಸಿನ ಮೇಲೆ ಗಾಢ ಪರಿಣಾಮವನ್ನು ಉಂಟು ಮಾಡಿದ್ದವು. ಲೌಕಿಕ ಬಂಧನದ ತಂದೆಯವರನ್ನು ಕಳೆದುಕೊಂಡಿದ್ದರೂ ಅಲೌಕಿಕ ಸಿದ್ಧಿಯನ್ನು ಸಂಪಾದಿಸಿಕೊಂಡ ತಂದೆಯವರ ಚಿಂತನೆಗಳು ಮಾತ್ರ ಸದಾ ಇವರನ್ನು ನೆನಪಿಸುತ್ತಿದ್ದವು. ಅವರು ಜನರಿಗೆ ಹೇಳುತ್ತಿದ್ದ ಅನೇಕ ಚಿಂತನೆಗಳಲ್ಲಿ : 1) ಎಲ್ಲಕ್ಕೂ ಆಸೆಯೇ ಮೂಲ ಆಸೆಪಟ್ಟಿದ್ದನ್ನು ಅನುಭವಿಸುವ ಅವಕಾಶ ಸಿಕ್ಕರೆ ಸಂತೋಷವಾಗುತ್ತದೆ. ಆಸೆಯ ಹಿಂದೆ ಪ್ರಯತ್ನ ಇದ್ದಾಗ ಮಾತ್ರ ಆನಂದ ಸುಲಭವಾಗಿ ಸಿಗುತ್ತದೆ. ಆಸೆ ಪ್ರಯತ್ನವಿಲ್ಲದೆ ಈಡೇರದೇ ಹೋಗಬಹುದು. ಆಗ ಅಸಮಧಾನ ಪಡಬೇಕಾಗಿಲ್ಲ. ಆದರೆ ಹಾಗಾಗುವುದೇ ಇಲ್ಲ. ಆಶಿಸಿದ್ದು ಸಿಗದೇ ಹೋದಾಗ ಅಸಂತೃಪ್ತಿಯಿಂದ ಮನುಷ್ಯ ಹತಾಶನಾಗುತ್ತಾನೆ. ಕಾರಣ ಇಂಥ ಆಸೆಯಿಂದ ಮೊದಲು ದೂರ ಉಳಿಯಬೇಕು ಎಂದು ಎಚ್ಚರಿಸುತ್ತಾರೆ. 2) ಜೀವನ

ಸುಂದರವಾಗಿರಬೇಕಾದರೆ ದೈಹಿಕ ಬೋಗವೇ ಅಲ್ಲಿ ಮುಖ್ಯ ಅಗಬಾರದು. ಜೀವನ ಬರೀ ಸಂಸಾರಿಕವಾಗಿದ್ದರೆ ಸಾಲದು. ಅದರ ಜೊತೆ ಅಲೌಕಿಕ ಸಂಸಾರ ಸಂಬಂಧಗಳ ಪಾವಿತ್ರತೆಯ ಅರಿವೂ ನಮಗೆಲ್ಲ ಇರಬೇಕಾಗುತ್ತದೆ ಎಂದು ಹೇಳಿದ ಮಾತುಗಳು ಇವರನ್ನು ಕಾಡುತ್ತಲಿದ್ದವು.

ರಾಜಕೀಯ ಪಲ್ಲಟದಿಂದ ಹಿಜಿರಾ ಶಕೆ 728 ರಂಜಾನ್ ತಿಂಗಳ 20ನೇ ತಾರೀಖಿನಂದು ಇವರ ಪರಿವಾರವು ದೆಹಲಿಯನ್ನು ತ್ಯಜಿಸಿ ದಕ್ಷಿಣ ಭಾರತದತ್ತ ಸುಮಾರು ಮೂರು ತಿಂಗಳ ಪ್ರಯಾಣದ ನಂತರ ಹಿಜರ ಶಕೆ ಮೊದಲು 17ನೇ ತಾರೀಕು ತಮ್ಮ ಪರಿವಾರದ ಸಮೇತ ದೌಲತಬಾದಿಗೆ ಬಂದಿಳಿದರು. ಅಲ್ಲಿಯ ಕೋಟೆಯ ಉತ್ತರ ಭಾಗದ ಗುಡ್ಡದ ಹತ್ತಿರ ತಮ್ಮ ನೆಲೆಯೂರಿದರು. ಈ ಭಾಗವನ್ನು 'ಖುಲ್ದಾಬಾದ್' ಎಂದು ಕರೆಯುತ್ತಿದ್ದರು.

"ಹಿಜಿರಾ ಶಕೆ 731 ಶವ್ವಾಲ್ ತಿಂಗಳ 5ನೇ ತಾರೀಕಿನಂದು ಅಂದರೆ ಕ್ರಿ.ಶ. 1330 ರಲ್ಲಿ ತಂದೆ ಹಜರತ್ ಸಯ್ಯದ್ ರಾಜ ಸಾಹೇಬರು ಅಲ್ಲಾಹನಲ್ಲಿ ವಿಸಾಲ (ಐಕ್ಯ)ತ್ವವನ್ನು ಪಡೆದರು. ಅವರನ್ನು 'ಖುಲ್ಲಾಬಾದಿನ' ತಮ್ಮ ಮನೆಯ ಅಂಗಳದಲ್ಲಿಯೇ ಸಕಲ ಧಾರ್ಮಿಕ ಸಂಸ್ಕಾರದೊಂದಿಗೆ ಅನುಭವಿಗಳಾದ ಸಯ್ಯದ್ ಯುಸೂಫ್ ಹುಸೇನಿ ಅವರ ದೇಹವನ್ನು ದಫನ್ ಮಾಡಲಾಯಿತು. ಅಂದಿಗೆ ಹಜರತ್ ಖಾಜಾ ಸಾಹೇಬರ ವಯಸ್ಸು 10 ವರ್ಷ 3 ತಿಂಗಳು ಒಂದು ದಿನವಾಗಿತ್ತು."[4]

ಈತನ ಸೋದರಮಾವರಾದ ಮುಲ್ಕುಲ್ ಉಮ್ರಾ ಜನಾಬ್ ಸಯ್ಯದ್ ಇಬ್ರಾಹಿಂ ಮಸ್ತುಫಿಯವರು ಅಂದಿನ ದಿನಗಳಲ್ಲಿ ದೌಲತಾಬಾದಿನ ಗವರ್ನರ್ ಆಗಿದ್ದರು. ಇವರ ತಾಯಿಯವರಿಗೂ ಗೌರ್ನರ್ ಸಾಹೇಬರಿಗೂ ಕಾರಣಾಂತರದಿಂದ ಮನಸ್ತಾಪ ಉಂಟಾಗಿ ದಿನೇ ದಿನೇ ಅದು ಅಸಹನೀಯವಾಗಿ ಬೆಳೆಯಿತು. ಇದರಿಂದ ದುಃಖಿತಗೊಂಡು ದೌಲತಾಬಾದ್ ತ್ಯಜಿಸಿ ಹಿಜರಿ 736 ರಜಬ್ ತಿಂಗಳ 4ನೇ ತಾರೀಕಿನಂದು ದೆಹಲಿಗೆ ವಾಪಸ್ ಬಂದು ನೆಲಸಿದರು. ಆಗ ಹಜರತ್‌ರ ವಯಸ್ಸು 15 ವರ್ಷಗಳಾಗಿದ್ದವು ಎಂದು ತಿಳಿಯುತ್ತದೆ.

**ಗುರುದರ್ಶನ :**

ಖುಲ್ದಾಬಾದಿನ ತಮ್ಮ ಮನೆಯಲ್ಲಿಯೇ ಇವರ ಶೈಕ್ಷಣಿಕ ದಿನಗಳು ಆರಂಭಗೊಂಡಿದ್ದವು. ಪ್ರಾರಂಭಿಕ ಶಿಕ್ಷಣ ತಮ್ಮ ಅಜ್ಜನವರ ಹಾಗೂ ತಂದೆಯ ಎದುರಿನಲ್ಲೇ ನಡೆದಿತ್ತು. ಚಿಕ್ಕಂದಿನಲ್ಲಿಯೇ ಕುರಾನ್ ಪಠಣವನ್ನು ಆರಂಭಿಸಿ ಸಂಪೂರ್ಣವಾಗಿ ಕಂಠಪಾಠ ಮಾಡಿ 'ಹಾಫೀಜ್–ಎ–ಕುರಾನ್' ರೆನಿಸಿಕೊಂಡರು. ಸೂಫಿ ಮತ್ತು ಸಂತ ಪರಂಪರೆಯಲ್ಲಿ ಯೋಗ್ಯ ಗುರುಗಳಿಂದ ದೀಕ್ಷೆಯನ್ನು ಪಡೆಯುವುದು ಸಹಜ ಕ್ರಿಯೆ ಆಗಿರುತ್ತದೆ. ಕೆಲವು ಸಂತರು ಭಾರತೀಯ ಅಧ್ಯಾತ್ಮೀಕ ಚರಿತ್ರೆಯಲ್ಲಿ ತಾವು 'ಸಂಕೇತ' ಟಂಕಿಸಿದ ಚಿಹ್ನೆಗಳೇ ತಮ್ಮ 'ಗುರು' ಎಂದು ಭಾವಿಸಿದ್ದುಂಟು, ಆದರೆ ಹಜರತರು ಯೋಗ್ಯ ಗುರುಗಳಿಂದ ದೀಕ್ಷೆಗಾಗಿ ಹುಡುಕಾಡಿದರು. "ತಮ್ಮ ಅಜ್ಜನವರಾದ ಸೂಫಿಗುರು ಹಜರತ್ ಸುಲ್ತಾನುಲ್ ಮಶಾಯಿಖ್ ಅವರಿಂದಲೂ ಹಾಗೂ ತಮ್ಮ ತಂದೆಯವರಿಂದಲೂ ದೀಕ್ಷೆ ಪಡೆದರು. ಈ ಸಂದರ್ಭದಲ್ಲಿ ದೆಹಲಿಯಲ್ಲಿದ್ದ ಹಜರತ್ ನಿಜಾಮುದ್ದೀನ್ ಅವ್‌ಲಿಯಾ (ಔಲಿಯ) ಮತ್ತು ಹಜರತ್ ಖಾಜಾ ನಸಿರುದ್ದೀನ್ ಚಿರಾಘ್ ಅವರ ಕೀರ್ತಿಯು ದೇಶದಲ್ಲೆಲ್ಲಾ ಹರಡಿತ್ತು. ಇವರ ಬಗ್ಗೆ ಅಪಾರವಾದ ಗೌರವ ಭಾವನೆಗಳು ಬೆಳೆದು ಇವರನ್ನು ನೋಡುವ ಹಂಬಲವೂ ದಿನೇ ದಿನೇ ಬೆಳೆಯತೊಡಗಿತ್ತು."[5] ಖುಲ್ದಾಬಾದಿಂದ ದೆಹಲಿಯನ್ನು ತಲುಪಿದ ಮೂರನೇ ದಿನವೇ ಸುಲ್ತಾನ್ ಖುತುಬುದ್ದೀನ್ ಐಬಕ್‌ನು ಕಟ್ಟಿಸಿದ ಜಾಮಾ ಮಸೀದಿಗೆ ಪ್ರಾರ್ಥನೆಯನ್ನು ಸಲ್ಲಿಸಲು 'ಹಜರತ್'ರು ಹೋದರು. "ಅಂದಿನ ಪ್ರಸಿದ್ಧ ಗುರು (ಪೀರ್) ಗಳಾದ ಹಜರತ್ ಖಾಜಾ ನಸೀರುದ್ದಿನ್ ಚಿರಾಘ್ ಅವರು ಅದೇ ಮಸೀದಿಗೆ ಪ್ರಾರ್ಥನೆಗೆ ಪ್ರತಿದಿನ ಬರುವವರೆಂದು ಅವರಿಗೆ ಗೊತ್ತಿತ್ತು. ಅವರನ್ನು ಕಾಣುವ ಹಂಬಲ ಬಹಳ ದಿನಗಳಿಂದ ಕಾಡುತ್ತಿತ್ತು. ಅವರ ಉದ್ದೇಶವೂ ಅಂ–ದು ಸಫಲವಾಯಿತ್ತು."[6] "ಕಾಂತಿಯುಕ್ತ ವ್ಯಕ್ತಿತ್ವದಿಂದ ಪ್ರಭಾವಿತರಾಗಿ 16 ರಜ್ಜಬ್ 736 ರಲ್ಲಿ ತಮ್ಮ ಅಣ್ಣ ಸಯ್ಯದ್ ಚಂದನ್ ಜೊತೆ ಹಜ್ರತ್ ನಾಸೀರುದ್ದೀನ್ ಚಿರಾಘ್ ದೆಹಲ್ವಿಯರರ ಹಸ್ತದ ಮೇಲೆ ದೀಕ್ಷೆ (ಬಯತ್) ಪಡೆದರು."[7]

ಸುಯೋಗ್ಯ ಗುರುಗಳ ಸಾನ್ನಿಧ್ಯದಲ್ಲಿ ಹಜರತ್‌ರ ಶಿಕ್ಷಣ ಮುಂದುವರೆಯಿತು. ಲೌಕಿಕ ಶಿಕ್ಷಣವನ್ನು ಅಧ್ಯಯನಿಸುವಾಗ ದೆಹಲಿಯಲ್ಲಿ ಹಲವು ಪಂಡಿತರಿಂದ ಪಡೆದರು. ಲೌಕಿಕ ಜ್ಞಾನದ ಅಧ್ಯಯನದ ಜೊತೆಯಲ್ಲೇ ಪ್ರಾರ್ಥನೆ, ದೈವೀ ಚಿಂತನೆಯಲ್ಲಿ ಸದಾ ಮಗ್ನರಾಗುತ್ತಿದ್ದರು. ತಮಗೆ ಲೌಕಿಕ ಜ್ಞಾನ ಅಧ್ಯಯನ ಸಾಕೆನಿಸಿದಾಗ ಇವರು ಅಲೌಕಿಕ ಜ್ಞಾನ (ಗುಪ್ತ ವಿದ್ಯೆ)ಯನ್ನು ಪಡೆಯುವ ಇಚ್ಛೆಯನ್ನು ತನ್ನ ಗುರು ಹಜರತ್ ಚಿರಾಘ್ ದೆಹಲ್ವಿಯ ಬಳಿ ಪ್ರಸ್ತಾಪಿಸಿದರು. "ಮರ್ಷಿದ್ ಹಜ್ರತ್‌ರು ಇವರನ್ನು ಬಜೂದಿ, ದಿಸಾರಾ, ಶಂಘಿಯಾ, ಕಶಫ್, ಹಾಗೂ ಮಿಸ್ಬಾ ಗ್ರಂಥಗಳನ್ನು ಪರಿಚಯಿಸಿ ಅದನ್ನು ಆಳವಾಗಿ ಅಭ್ಯಾಸಿಸಲು ಸೂಚಿಸಿದರು. ತಮ್ಮಿಂದ ಒಂದು ಕೆಲಸ ತೆಗೆದುಕೊಳ್ಳಬೇಕಾಗಿದೆ ಎಂದು ಹಜ್ರತ್ ಚಿರಾಘ್ ದೆಹಲ್ವಿಯವರು ನುಡಿದರು."[8]

ಇವರಲ್ಲಿ 'ಮುರಾಖಿಬ' (ಯೋಗ) ದಂತಹ ಕಠಿಣ ಸಾಧನೆಯ ಶಕ್ತಿ ಇದೆಯೆಂದು ಗುರ್ತಿಸಿದ ಹಜರತ್ ನಸೀರುದ್ದೀನ್ ಚಿರಾಘ್ ಅವರು ಒಂದು ದಿನ ತಮ್ಮ ಶಿಷ್ಯ ಹಜರತ್ ಖಾಖಾ ಸಾಹೇಬರನ್ನು ಹತ್ತಿರ ಕರೆದು ಪ್ರೇಮದಿಂದ ಗುಪ್ತ ವಿದ್ಯೆಯನ್ನು ಉಪದೇಶಿಸತೊಡಗಿದರು."[9]

ಮುರ್ಷಿದ ಹಜರತ್ ದೆಹಲ್ವಿಯವರು ತಮ್ಮ ಜೀವಿತದ ಕೊನೆ ದಿನಗಳಲ್ಲಿ ರೋಗಕ್ಕೆ ತುತ್ತಾಗಿ ನರಳುವಾಗ ತಮ್ಮ ಮುರೀದ್ ಹಜರತ್ ಗೇಸೂದರಾಜರ ಮೊರೆಹೋದರು. ಆಗ ಗೇಸೂದರಾಜರ ಪ್ರಾರ್ಥನೆಯ ಫಲಸ್ವರೂಪವಾಗಿ ಅವರು ಗುಣಮುಖರಾದರೆಂದು ಹೇಳಲಾಗುತ್ತಿದೆ. ಹಾಗೆಯೇ ಒಮ್ಮೆ ಗೇಸೂದರಾಜರ ತನ್ನ 37ನೇ ವಯಸ್ಸಿನಲ್ಲಿ ರೋಗದಿಂದ ರಕ್ತ ವಾಂತಿಯಿಂದ ಬಳಲಿದರು. ಆಗ ಹಜರತ್ ನಾಸೀರುದ್ದೀನ್ ಚಿರಾಘ್ ದೆಹಲ್ವಿಯವರು ಅವರಿಗಾಗಿ ಔಷಧಿ, ವೈದ್ಯರು ಹಾಗೂ ಶುಶ್ರೂಕರನ್ನು ಕಳುಹಿಸಿ ಗುಣಪಡಿಸಿದರು. ಇದು ಜ್ಞಾನದ ಕೊಡುಕೊಳ್ಳುವಿಕೆಯ ಜೊತೆಗೆ ಪ್ರೇಮತ್ವವನ್ನು ಬಂದಿಸಿಕೊಳ್ಳುತ್ತದೆ ಎಂದು ಅನಿಸುತ್ತದೆ.

ತಮ್ಮ ಮರಣದ ನಂತರ 'ಖಲೀಫಾ' ಪದವಿ ಯಾರು ಪಡೆಯಬೇಕೆಂದು ಹಜರತ್ ಚಿರಾಗರು ಮೌಲಾನ್ ಜೈನುದ್ದೀನರಿಗೆ ಪಟ್ಟಿ ಮಾಡಿಕೊಂಡು ಬರಲು ಸೂಚಿಸುತ್ತಾರೆ. ಆಗ ಮೌಲನರು ಮೊದಲ ಪಟ್ಟಿಯನ್ನು ಮಾಡಿಕೊಂಡು ತೋರಿಸುತ್ತಾರೆ. ಇದನ್ನು ಗಮನಿಸಿದ ಹಜರತ್ ಚಿರಾಗ್‌ರು ಮತ್ತೊಮ್ಮೆ ಪಟ್ಟಿ ಮಾಡಿಕೊಂಡು ಬರಲು ಹೇಳುತ್ತಾರೆ. ಜೈನುದ್ದೀನರು ಮೊದಲ ಪಟ್ಟಿಯಲ್ಲಿ ಇರುವ ಹೆಸರುಗಳನ್ನು ಕಡಿಮೆ ಮಾಡಿಕೊಂಡು ಹಜರತ್ ಚಿರಾಗ್‌ಗೆ ಒಪ್ಪಿಸುತ್ತಾರೆ. ಇದನ್ನು ಮನಗಂಡು ಹಜರತ್‌ರು ನೀವು ಹಜರತ್ ಗೇಸೂದರಾಜರ ಹೆಸರನ್ನೇಕೆ ಸೇರಿಸಲಿಲ್ಲ? ಎಂದು ಕೇಳಿದಾಗ ಜೈನುದ್ದೀನರು ನಿರುತ್ತರವಾಗಿ ಥರಥರನೆ ನಡುಗಲಾರಂಭಿಸಿದರು. ಪಟ್ಟಿಯನ್ನು ಹಜರತದಿಂದ ವಾಪಸ್ ಪಡೆದು ಗೇಸೂದರಾಜರ ಹೆಸರನ್ನು ಸೇರಿಸಿ ತಮ್ಮ ನೀಚತನಕ್ಕೆ ನಾಚಿದರು. ನಂತರ ಗುರುಗಳ ಆಜ್ಞಾನುಸಾರ ವಿಧವತ್ತಾಗಿ ಖಲಿಫಾ ಪದಿವಿಯನ್ನು ಅಲಂಕರಿಸಿದರು. ಆಗ ಅವರಿಗೆ 32 ವರ್ಷಗಳು ತುಂಬಿದ್ದವು. ಗುರು ನಸಿರುದ್ದೀನರೇ ಖಾಜಾ ಸಾಹೇಬ–ರಿಗೆ 'ಬಂದೇನವಾಜ್' ಎಂಬ ಬಿರುದು ನೀಡಿ ಆಶೀರ್ವದಿಸುತ್ತಾರೆ. "ಈ ಘಟನೆಯಾದ ಕೇವಲ ಮೂರು ದಿನಗಳ ನಂತರ ಅಂದರೆ ಹಿಜರಿ 757 ರಂಜಾನ್ ತಿಂಗಳ 18ನೇ ಶುಕ್ರವಾರದಂದು ಹಜರತ್ ಖಾಜಾ ನಸೀರುದ್ದೀನ್ ಚಿರಾಘ್ ದೆಹಲಿಯವರು ಅಲ್ಲಾಹ್‌ನ ಸಾನ್ನಿದ್ಯದಲ್ಲಿ ಲೀನ ವಸಾಲತ್‌ರಾದರು."[10]

"ಇವರು ತಮ್ಮ ಪೀರ್‌ರ (ಸಂತಗುರು) ಸೇವೆಯಲ್ಲಿ ದೆಹಲಿಯಲ್ಲಿ ಇಪ್ಪತ್ತೊಂದು ವರ್ಷಗಳನ್ನು (1736–757/1335–1356) ಕಳೆದು, ಅವರ ನಿಧನದ ಬಳಿಕ 44 ವರ್ಷಗಳು ಸಜ್ಜಾದಾ (ದರ್ಗಾದ ಧಾರ್ಮಿಕ ಮುಖಂಡ) 757–801/1356–1398) ರಾಗಿದ್ದು ನಂತರ ದೆಹಲಿಯನ್ನು ತ್ಯಜಿಸಿ ದಖ್ಖಿನ್ನಿನತ್ತ ಪ್ರಯಾಣ ಬಳೆಸಿದರು."[11] ಸುಮಾರು 44 ವರ್ಷಗಳು ದೆಹಲಿಯಲ್ಲಿ ವಾಸ್ತವ್ಯ ಸೂಫಿ ಜೀವನದ ಮಹತ್ವದ ಘಟ್ಟವಾಗಿದೆ.

ತಮ್ಮ ನಲವತ್ತನೆಯ ವರ್ಷದ ವಯಸ್ಸಿನಲ್ಲಿ ಹಜರತ್ ಗೇಸೂದ್‌ರಾಜರು ತಾಯಿಯ ಒತ್ತಾಸೆಯಂತೆ ವಿವಾಹವಾಗಲು ಸಮ್ಮತಿಸಿದರು. ಸೂಫಿ ಸಂತರೂ ಆದ ಸಯ್ಯದ್ ಅಹಮ್ಮದ್ ಬಿನ್ ಹಜರತ್ ಮೌಲಾನ್ ಸಯ್ಯದ್ ಜಮಾಲ್ ಮುಗ್ರಬಿಯವರ ಮಗಳು ಬೀಬಿ ರಜಾ ಖಾತೂನ್ ಅವರೊಂದಿಗೆ

ಸರಳವಾಗಿ ಮದುವೆಯಾದರು. "ಮೌಲಾನ ಸಯ್ಯದ್ ಜಮಾಲ್ ಅವರು ಬಿಜಾಪುರದ ಸೂಫಿ ಸಂತ ಪರಂಪರೆಯಲ್ಲಿ ಪ್ರಸಿದ್ಧರಾದ ಹಜರತ್ ಮೀರಾನ್‌ಜಿ ಶಂಕುಲ್ ಆಶಾಯಖ್‌ರ ಪೀರ್ (ಗುರು) ಹಜರತ್ ಕಮಾಲುದ್ದೀನ್ ವಾಹಿದುಲೇ ಇಸ್ತಾರ್ ಬಿಯಾಖಾನಿ, ಹಜರತ್ ಜಮಾಲುದ್ದೀನ್ ಮಗ್ರಬಿಯವರು ಶಿಷ್ಯರಾಗಿದ್ದು, ದಕ್ಷಿಣ ಭಾರತದ ಪರಿಚಯವುಳ್ಳವರಾಗಿದ್ದಾರೆ."[12]

"ಇವರಿಗೆ ಇಬ್ಬರು ಗಂಡು ಮಕ್ಕಳು ಮತ್ತು ಮೂರು ಜನ ಹೆಣ್ಣು ಮಕ್ಕಳಿದ್ದರು. ತಮ್ಮ ಹಿರಿಯ ಮಗನಾದ ಹಜರತ್ ಸಯ್ಯದ್ ಹುಸೇನ್ ಉರ್ಫಾ ಸಯ್ಯದ್ ಮಹಮ್ಮದ್ ಅಕ್ಬರ್ ಅವರು ಅಂದಿನ ಕಾಲದ ಶ್ರೇಷ್ಠ ವಿದ್ವಾಂಸರಾಗಿದ್ದು, ತಮ್ಮ ತಂದೆಯವರ ಅಧ್ಯಾತ್ಮಿಕ ಖಲೀಫರಾಗಿ ಪ್ರಸಿದ್ಧರಾಗಿದ್ದರು. ದುರದೃಷ್ಟವಶಾತ್ ಹಜರತ್ ಖಾಜಾ ಸಾಹೇಬರ ಕಣ್ಣೆದುರಿನಲ್ಲೇ ಪರಲೋಕ ವಾಸಿಯಾದರು. ಎರಡನೇ ಮಗನಾದ ಹಜರತ್ ಸಯ್ಯದ್ ಮಹಮ್ಮದ್ ಅಸ್ಫರ್ ಹುಸೇನಿಯವರು ಒಳ್ಳೆಯ ವಿದ್ವಾಂಸರು."[13] ತಮ್ಮ ತಂದೆಯವರ ಮರಣಾನಂತರ ಅವರ ಜಾಗದಲ್ಲಿ ಆಧ್ಯಾತ್ಮಿಕ ಸಿಂಹಾಸನವನ್ನೇರಿದಿರು. ಇನ್ನೂ ಮೂರು ಜನ ಹೆಣ್ಣು ಮಕ್ಕಳು 1) ಬೀಬಿ ಫಾತಿಮ ಉರ್ಫ್ ಸಲೆಬೀಬಿ, 2) ಬೀಬಿ ಬತೂಲ್, 3) ಬೀಬಿ ಉಮ್–ಎ–ದಿನ್ ಇದ್ದರೆಂದು ತಿಳಿಯುತ್ತದೆ.

ದೆಹಲಿ ರಾಜಕೀಯ ಸ್ಥಿತಿಯೂ ಕಲುಷಿತಗೊಂಡ ಕಾರಣದಿಂದ ಅವರು ದಖನಿನ ಕಡೆಗೆ ಬರಲು ಅನಿವಾರ್ಯ ಆಯ್ತು. ಇವರು ಗುಲಬರ್ಗಾಕ್ಕೆ ಬರುವ ಸಂದರ್ಭದಲ್ಲಿ ಆಗ ದಕ್ಷಿಣದಲ್ಲಿ ಫಿರೋಜ ಷಾ ಬಹಮನಿ ಆಳುತ್ತಿದ್ದ. ಬಂದೇನವಾಜರು ದೌಲತಾಬಾದಿಗೆ ಬಂದು ನೆಲೆಸಿದ ಸಮಚಾರ ಕೇಳಿ ಬಾದಷಾಹ ಸಂತುಷ್ಟನಾದ. ದೌಲತಾಬಾದಿನ ಬಾದಷಹನ ಸುಬೇದಾರ ಅಸಮಲ್ ಮುಲ್ಕ್ ಆಡಳಿತ ನಡೆಸುತ್ತಿದ್ದ. ಆತನ ಮೂಲಕ ಬಾದಷಾಹನು ಅರಮನೆಯ ಕಾಣಿಕೆಯನ್ನು ಗೌರವಪೂರ್ವಕವಾಗಿ ಬಂದೇನವಾಜ್‌ರಿಗೆ ಅರ್ಪಿಸಲು ಕಳುಹಿಸಿ ಕೊಟ್ಟುದ್ದಲ್ಲದೆ. ಮಹಾತ್ಮರು ರಾಜಧಾನಿಯಾದ ಕಲಬುರಗಿ ದಯಮಾಡಿಸಲು ಭಿನ್ನವಿಸಿಕೊಳ್ಳಬೇಕೆಂದು ಸುಬೇದಾರನಿಗೆ ಆದೇಶಿಸಿದನು. ನಂತರ ಹಜರತರ್‌ರಾಜರ ಪ್ರಾರ್ಥನೆಯನ್ನು ಮನ್ನಿಸಿ ತಮ್ಮ ಕುಟುಂಬ ಮತ್ತು ಶಿಷ್ಯರೊಂದಿಗೆ ದೌಲತಾಬಾದಿನಿಂದ ಹೊರಟರು. ಆಳಂದ ಮಾರ್ಗವಾಗಿ ಗುಲಬರ್ಗಾ ಗಡಿಯನ್ನು ಪ್ರವೇಶಿಸಿದರು. ಆಗ ಸುಲ್ತಾನ್ ಫೀರೋಜ್ ಷಹ ಸೈನ್ಯ ಸಮೇತ ಸ್ವತಃ ನಡೆದು ಸಕಲ ರಾಜಮರ್ಯಾದೆಯೊಂದಿಗೆ ಹಜರತ್‌ರನ್ನು ಅವರ ಜೊತೆಗೆ ಬಂದಿದ್ದ ಶಿಷ್ಯರನ್ನು ಸಾಧುಸಂತರರನ್ನು ಅತಿ ವಿಜೃಂಭಣೆಯಿಂದ ಸ್ವಾಗತಿಸಿದ. ಕಲಬುರಗಿ ಕೋಟೆಯ ಹತ್ತಿರ ಇದ್ದ 'ಖಾನ್‌ಖಾಹ್'ದಲ್ಲಿ ಕೆಲಕಾಲ ವಾಸ ಮಾಡಿದರು. ಆಮೇಲೆ ಬಾದಷಹನ ವಿನಂತಿಯ ಮೇರೆಗೆ ಈಗ 'ದರ್‌ಗಾ ಷರೀಫ್' ಇರುವ ಸ್ಥಳದಲ್ಲಿ ಅವರಿಗಾಗಿ ವಾಸದ ವ್ಯವಸ್ಥೆಯಾಯಿತು. ಅಲ್ಲಿಯೇ ಶಾಸ್ವತವಾಗಿ ನೆಲೆಸಿದರು.

"ಸುಲ್ತಾನ್ ಫೀರೋಜ್ ಷಹ ದಿವಂಗತನಾದ ಮೇಲೆ ಆತನ ತಮ್ಮನಾದ ಅಹಮ್ಮದ್ ಶಾಹ ರಾಜ್ಯದ ಪಟ್ಟಕ್ಕೆ ಬಂದನು. ಈತನೂ ಬಂದೇನವಾಜ್‌ರನ್ನು ಪೂಜ್ಯ ಭಾವನೆಯಿಂದ ಕಂಡು ಅವರನ್ನು ರಾಜಗುರುಗಳೆಯ ಮನ್ನಿಸಿದನು"[14]

**ಸಂಕರಣತೆ:**

ಖಾಜಾ ಬಂದೇನವಾಜರ ಕಾಲಕ್ಕೂ ಸಂತ ಶಿವಶರಣರ ಕಾಲಕ್ಕೂ ಹಲವು ವರ್ಷಗಳ ಅಂತರವಿದ್ದರೂ ಜನರು ತಮ್ಮ ಕಾಲದ ತಾವು ನಂಬಿಕೊಂಡಿರುವ ಸಮೀಕರಿಸಿಕೊಂಡು ಚಿತ್ರಿಸುವುದು ಸಹಜ ಕ್ರಿಯೆಯಾಗಿ ಬದುಕುತ್ತಿರುವುದು ಕಂಡುಬರುತ್ತದೆ. ಇದು 'ಜನತೆಯ ಧರ್ಮ' ರೂಪಕವಾಗಿ ಚಲನಶೀಲರಾಗಿರುತ್ತದೆ.

ಒಂದು: ಕಲಬುರ್ಗಿಯ ಬಂದೇನವಾಜ ಸಂತರ ದರ್ಗಾದಲ್ಲಿ ಕಂಡುಬರುವ ಪಾದಗಳ ಕಥೆ ಬೇರೆ ರೀತಿಯದು. ದರ್ಗಾದ ಬಾಗಿಲ ಮುಂದೆ ಮತ್ತು ಬಾಗಿಲಿನ ಎತ್ತರ ಕಟ್ಟೆಯ ಮೇಲೆ ಎರಡು ಗುರುತು ಮೂಡಿವೆ. ಒಬ್ಬ ಕಳ್ಳನ ಸಂಕೇತವಾಗಿ ಈ ಪಾದಗಳು ರಚನೆಯಾಗಿ ಕಥೆಯೊಂದನ್ನು ತಿಳಿಸುತ್ತದೆ. ಹಿಂದೆ ತೀರ ಭಾಗದಲ್ಲಿ ಕಟ್ಟಿರುವ ಚಿನ್ನದ ಪಾದವನ್ನು ಅಪಹರಿಸಲು ಬಂದ ಕಳ್ಳ ಅದನ್ನು ಮುಟ್ಟುವಷ್ಟರಲ್ಲಿಯೇ ಅದು ಮೇಲೇರಿ ದರ್ಗಾದ ತುಟ್ಟತುದಿಗೆ ಹೋಗಿ ಅಂಟಿಕೊಂಡಿತು. ಕಳ್ಳ ಪಶ್ಚಾತ್ತಾಪದಿಂದ ಹಿಂದಿರುಗಿದ ಎಂದು ಹೇಳಿಕೊಳ್ಳುವ ಕಥನವೂ ಇದೊಂದು ಕಲೋಪತೆ, ಮೂಡನಂಬಿಕೆ ಎಂದು ಸರಾಸಗಟವಾಗಿ ತಿರಸ್ಕರಿಸಬಹುದು. ಆದರೆ ಇದರೊಳಗೆ ಹೆಚ್ಚು ಸೂಕ್ಷ್ಮತೆಯಿಂದ ಇಣುಕಿದಾಗ ಇದರ ಹಿಂದೆ ಇರುವ ತತ್ವವು ಗೋಚರಿಸುತ್ತದೆ. ಸಮಾಜದಲ್ಲಿ 'ಕಳ್ಳ' ಅಂದರೆ ಅವನು ಅಪನಂಬಿಕೆ ವ್ಯಕ್ತವಾಗಿ, ಬುದ್ದಿಹೀನತೆವುಳ್ಳವನಾಗಿ ಕಾಣುತ್ತಾನೆ. ಇಂತಹವರು ಸಹ ಈ ಸೂಫಿಗಳಲ್ಲಿ ಬರುವುದರಿಂದ 'ಶುದ್ಧ ವ್ಯಕ್ತಿ'ಯಾಗಿ ರೂಪಗೊಳ್ಳುತ್ತಾನೆ ಎಂದು ಪ್ರತಿಪಾದಿಸುವುದು ಅವರ ನಿಲುವು ಆಗಿರುತ್ತದೆ.

"ಬಂದೇನವಾಜ್ ಹಾಗೂ ಕಲಬುರಗಿ ಶರಣಬಸವೇಶ್ವರರ ಇದ್ದ ದೋಸ್ತಾರದ ಬಗ್ಗೆ ಅನೇಕ ಮಿತ್‌ಗಳಿವೆ. ಬಂದೇನವಾಜ್ ಪುರುಷ ಬಟ್ಟಲು ಬಾರದೆ ಶರಣ ಬಸವೇಶ್ವರನ ತೇರು ಚಲಿಸುವುದಿಲ್ಲವೆಂಬ ಇತ್ಯಾದಿ ನಂಬಿಕೆಗಳಿವೆ. ಈ ಸಿದ್ದೇಶ್ವರನು ಬಂದೇನವಾಜನ ಶಿಷ್ಯನಾಗಿದ್ದ ಕುಸನೂರಿನ (ಗುಲಬರ್ಗಾ) ಸಿದ್ಧಯ್ಯನಿರಬಹುದು. ಬಂದೇನವಾಜ್ ಚಾರಿತ್ರೆಗಳು ಹೇಳುವಂತೆ ಅವನ ಮೂರು ಶಿಷ್ಯರಲ್ಲಿ (ಏಕನಾಥ, ಚೆನ್ನಬಸವೇಶ್ವರ, ಸಿದ್ದಪ್ಪ) ಒಬ್ಬನಾದ ಸಿದ್ದಪ್ಪನೂ ಇರಬಹುದು. ಯಾವತ್ತು ಭಾರತದ ಚಿಕ್ಕ ಸೂಫಿಗಳಿಗೆ ಸಿದ್ಧಪಂಥದ ಸಂಬಂಧ ಗಾಢವಾಗಿ ಇತ್ತು."[15]

ಕಲಬುರಗಿಯ ಉರುಸಿಗೆ ಬರಬೇಕೆಂದು ಬಾದಶಹ ಸಾವಳಗಿ ಶಿವಲಿಂಗೇಶ್ವರ ಶಿವಯೋಗಿಗೆ ಆಮಂತ್ರಣ ಕಳಿಸಿದರು. ಸೇವಕ ದರ್ಪದಿಂದ ಬೇಸರಗೊಂಡ ಶಿವಲಿಂಗೇಶ್ವರರು ಒಪ್ಪಲಿಲ್ಲ ಆಮಂತ್ರಣವನ್ನು ನಿರ್ಲಕ್ಷಿಸಿದರೆಂದು ಕೋಪಕೊಂಡ ಬಂದೇನವಾಜರು ಸರ್ಪದ ಚಾವಟಿ ಹಿಡಿದು ಹುಲಿಯೇರಿ ಶಿವಲಿಂಗೇಶ್ವರನ್ನು ನೋಡಲು ಹೊರಟರೆಂದು ಪುರಾಣ ಮತ್ತು ಲಾವಣಿಗಳು ವರ್ಣನೆ ಮಾಡುತ್ತವೆ. ಶಿಷ್ಯರೊಂದಿಗೆ ಕಟ್ಟೆಯ ಮೇಲೆ ಕೂತ್ತಿದ್ದ ಶಿವಲಿಂಗೇಶ್ವರರಿಗೆ ತಿಳಿದು 'ದೊಡ್ಡವರು ಬರುತ್ತಿದ್ದಾರೆ ಎದಿರುಗೊಳ್ಳಲು ನಡೆ' ಎಂದು ಕೂತ್ತಿದ್ದ ಕಟ್ಟೆಯನ್ನೇ ನಡೆಸಿಕೊಂಡು ಗರ್ಜಿಸುವ ಹುಲಿಯೇರಿ ಅದರ ಕೋಪತಾಪಗಳನ್ನು ಸರ್ಪದ ಚಾವಟಿಯಿಂದ ನಿಯಂತ್ರಿಸುತ್ತ ಬರುತ್ತಿದ್ದ ಬಂದೇನವಾಜರು ಕಲ್ಲು ಮಣ್ಣಿನ ಕಟ್ಟೆಯೇರಿ 'ವಾಹನದಂತೆ' ನಡೆಸಿಕೊಂಡು ಬರುತ್ತಿರುವುದನ್ನು ನೋಡಿ ಆವಾಕ್ಕಾದರು. ಮುಂದೆ ಇಬ್ಬರೂ ತಂತಮ್ಮ ವಾಹನಗಳ ಮೇಲೆ ಕೂತುಕೊಂಡೇ ಹದಿಮೂರು ದಿನಗಳ ಕಾಲ ತಮ್ಮಿಬ್ಬರ ವಾದವನ್ನು ಮಂಡಿಸಿದರು. ಬಂದೇನವಾಜರು ಸೋತು ಶಿವಲಿಂಗೇಶ್ವರರನ್ನು ಕಲಬುಗಿಯ ಉರುಸಿಗೆ ಕರೆದೊಯ್ದು ಸನ್ಮಾನಿಸಿದರು. ಶಿವಯೋಗಿಗೆ ಮೀಸಲು ಹಸಿರುಡುಗೆ ತೊಡಿಸಿ ಶಿಲೆಮಣಿ ಶಮಣ ಟೊಪ್ಪಿಗೆಗಳನ್ನು ಕೊಟ್ಟು ಅವರ ಗೌರವಿಸಿ ತಾವೂ ಕಾವೀ ಬಟ್ಟೆ ಉಟ್ಟು ತಮ್ಮ ಸ್ನೇಹ ಚಿರಯುವಾಗಲೆಂದು ಮುಂದಿನವರಿಗೆ ಅನುಕರಣೆಯ ಆಚರಣೆಯಾಗಲೆಂದು ಹಾರೈಸಿದರು. ಇನ್ನೊಂದು ಕಥನವು ಶಿವಲಿಂಗೇಶ್ವರರು ಸೋತರು ಬಂದೇನವಾಜರಿಗೆ ಶರಣಾದರು ಎಂದು ಚಿತ್ರಿಸುತ್ತಾರೆ. ಇದು ಸ್ವಲ್ಪ ಭಿನ್ನಹ ಅನಿಸಿದರು ಕಥನದ ಆತ್ಮವು ಒಂದೇ ಬಗೆಯನ್ನು ಬಯಸುತ್ತಿದೆ. ಅದು ಗುರುಶಿಷ್ಯರ ಗುದ್ದಾಟ, ಜ್ಞಾನದ ಹಂಚಿಕೊಳ್ಳುವಿಕೆ ಹಾಗೂ ಧಾರ್ಮಿಕ ಮೀರಿದ ಗೆಳೆತನ. ಶಿವಲಿಂಗನ ಸಂಗಾತಿಯಾದ ಸೂಫಿಯೂ ಮೊದಲನೇ ಬಂದೇನವಾಜ್ (1317–1422) ಅಲ್ಲ. ಅವನ 17ನೇ ತಲೆಮಾರಿನ ಖಲೀಫನಾದ ಖಾಜಾವಲಿ ಹುಸೇನ ಬಂದೇನವಾಜರು (1676)[16] ಎಂದು ನಿರ್ಧರಿಸಿದರೂ ನಂಬಿಕೊಂಡಿರುವ ಸಮುದಾಯಗಳಿಗೆ ಚಾರಿತ್ರಿಕ ದಾಖಲಾತಿಗಳು ಮುಖ್ಯವಾಗಿರುವುದಿಲ್ಲ. ತಾನು ಬದುಕುತ್ತಿರುವ ಸಮಕಾಲೀನದೊಂದಿಗೆ ಚರಿತ್ರೆಯನ್ನು ನಿರೂಪಿಸಿಕೊಳ್ಳುವುದು ಸೂಫಿ, ಸಂತರ 'ದಾರ್ಶನಿಕತೆ'ಯನ್ನು ಉಳಿಸಿಕೊಂಡು ಬದುಕುವುದು ಇವರ ಸೃಜನಶೀಲತೆ ಆಗಿರುತ್ತದೆ.

ಇವರು ಸುಮಾರು 105 ವರ್ಷಗಳ ದೀರ್ಘ ಜೀವನವನ್ನು ಬದುಕಿ, ಹಿಜರಿ 825 ಜೇಖದ್ ತಿಂಗಳ 16 ತಾರೀಖು ಸೋಮವಾರಂದು ಅಲ್ಲಾಹ್‌ನಲ್ಲಿ ವಿಸಾಲತ್ ಪದವಿಯನ್ನು ಪಡೆದರು.

**ಕೊನೆ ಟಿಪ್ಪಣಿ:**

1) ಜಯಶ್ರೀ ದಂಡೆ: ಖಾಜಾ ಬಂದೇನವಾಜ 2005, ಪುಟ–02
2) ಅಬ್ದುಲ್ ಹಮೀದ್: ಬಂದೇನವಾಜ್ 1994, ಪುಟ–06
3) ಅಬ್ದುಲ್ ಹಮೀದ್: ಬಂದೇನವಾಜ್, 1994, ಪುಟ–07
4) ಅಬ್ದುಲ್ ಹಮೀದ್: ಬಂದೇನವಾಜ್, 1994, ಪುಟ–09
5) ಸಂತೋಷಕುಮಾರ: ಖಾಜಾ ಬಂದೇನವಾಜ್ ಮತ್ತು ಶರಣಬಸವೇಶ್ವರ ಜಾತ್ರೆಗಳು: ಒಂದು ಸಾಂಸ್ಕೃತಿಕ ಅಧ್ಯಯನ, 2012, ಎಂ.ಫಿಲ್ ನಿಬಂಧ ಅಪ್ರಕಟಿತ), ಪುಟ.32.
6) ಅಬ್ದುಲ್ ಹಮೀದ್: ಬಂದೇನವಾಜ್ 1994, ಪುಟ–10–11.
7) ಬೋಡೆ ರಿಯಾಜ್ ಅಹ್ಮದ್: ಪ್ರೇಮ ಸೂಫಿ ಬಂದೇನವಾಜ್, 2018, ಪುಟ–30.
8) ಬೋಡೆ ರಿಯಾಜ್ ಅಹ್ಮದ್: ಪ್ರೇಮ ಸೂಫಿ ಬಂದೇನವಾಜ್, 2018, ಪುಟ–30.
9) ಅಬ್ದುಲ್ ಹಮೀದ್: ಬಂದೇನವಾಜ್, 1994, ಪುಟ–12.
10) ಅಬ್ದುಲ್ ಹಮೀದ್: ಬಂದೇನವಾಜ್, 1994, ಪುಟ–14.
11) ಬೋಡೆ ರಿಯಾಜ್ ಅಹ್ಮದ್ : ಪ್ರೇಮ ಸೂಫಿ ಬಂದೇನವಾಜ್, 2018, ಪುಟ–32.
12) ಅಬ್ದುಲ್ ಹಮೀದ್: ಬಂದೇನವಾಜ್, 1994, ಪುಟ–14.
13) ಅಬ್ದುಲ್ ಹಮೀದ್: ಬಂದೇನವಾಜ್, 1994, ಪುಟ–117.
14) ಜಯತೀರ್ಥ ರಾಜಪುರೋಹಿತ: ಖಾಜಾ ಬಂದೇನವಾಜ್, 2005, ಪುಟ–16.
15) ರಹಮತ್ ತರೀಕೆರಿ: ಕರ್ನಾಟಕ ಸೂಫಿಗಳು, 2008, ಪುಟ–67.
16) ರಹಮತ್ ತರೀಕೆರಿ: ಕರ್ನಾಟಕ ಸೂಫಿಗಳು, 2008, ಪುಟ–92.